ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು : ಮೂರು ಪ್ರಶ್ನೆಗಳನ್ನು ಕೇಳಿದ್ದೀರಿ.

ಶ್ರೀ ಗುರುಪಾದಪ್ಪ ನಾಗರಮಾರಪಲ್ಲಿ : ಪ್ರಶ್ನೆ ನನ್ನದು. ನಾನು ಎರಡನೇ ಸಾರಿ ಕೇಳುವುದು ಬೇಡವೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ : ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ ಎಂದು ಮಾನ್ಯ ಅಧ್ಯಕ್ಷರು ಸ್ವಯಂಪ್ರೇರಿತರಾಗಿ ಅರ್ಧ ಗಂಟೆ ಚರ್ಚೆಗೆ ಅವಕಶ ಕೊಟ್ಟಿದ್ದಾರೆ. ನೀವು ಮತ್ತೆ ಅದನ್ನೇ ಕೇಳುವುದಾದರೆ ನಮ್ಮ ಪ್ರಶ್ನೆಗೆ ಕಾಯ್ದುಕೊಂಡು ಕುಳಿತಿದ್ದೇವೆ. ನಮ್ಮ ಪ್ರಶ್ನೆ ಕೇಳುವುದು ಬೇಡವೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇದು ಮಹತ್ವದ ಪ್ರಶ್ನೆ ಅಲ್ಲವೆಂದು ಹೇಳುವುದಾದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಆ ರೀತಿ ತಾವು ಪರಿಗಣಿಸುವುದಾದರೆ ಬಹಳ ಸಂತೋಷ.

ಅಧ್ಯಕ್ಷರು : ಕೇಳಿ, ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇತ್ತೀಚೆಗೆ ಕೇಂದ್ರ ಸರ್ಕಾರದ ಉನ್ನತ ತಂಡವು ಈ ಪ್ರದೇಶದಲ್ಲಿ ಅಧ್ಯಯನ ನಡೆಸಿ ಕೇಂದ್ರಕ್ಕೆ ವರದಿ ಸಲ್ಲಿಸಿರುವುದು ನಿಜವೇ ಅಂದರೆ "ಹೌದು" ಅಂದಿದ್ದೀರಿ. ಅವರು ಎಷ್ಟು ದುಡ್ಡು ಬೇಕು ಎಂದು ವರದಿ ಕೊಟ್ಟಿದ್ದಾರೆ. ಎಷ್ಟು ಹಣಬೇಕೆಂಬ ಬಗ್ಗೆ ವರದಿ ಕೊಟ್ಟಿದ್ದಾರೆ, ಅದರ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದೆಯೇ? ಹಣ ಎಷ್ಟು ಎಂದು ಹೇಳಲಿಲ್ಲ. ವರದಿ ಸಲ್ಲಿಸಿದ್ದಾರೆ. ಎಷ್ಟು ಹಣ ಲುಕ್ಸಾನಾಗಿದೆ, ಸರ್ಕಾರದ ಆಸ್ತಿಪಾಸ್ತಿಗಳು, ಖಾಸಗಿ ಆಸ್ತಿಪಾಸ್ತಿಗಳು ಸತ್ತಿರತಕ್ಕವರು ಇಷ್ಟು, ಮನೆಗಳು ಬಿದ್ದವು ಇಷ್ಟು ಎಂದು ಹಾಗೂ ಬೆಳೆ ಹಾನಿ ಬಗ್ಗೆ ಹೇಳಿದ್ದಾರೆಯೇ? ಈ ಅಧ್ಯಯನದ ವರದಿಯಲ್ಲಿ ಎಷ್ಟು ಹಣ ಬೇಕು ಎಂದು ಕೇಳಿರುವುದರ ಬಗ್ಗೆ ನಿರ್ದಿಷ್ಟವಾದ ಅಂಕಿ ಅಂಶ ತಮ್ಮಲ್ಲಿ ಇದೆಯೇ? ದಯವಿಟ್ಟು ಅಂಕಿಅಂಶ ಹೇಳುತ್ತೀರಾ?

ಶ್ರೀ ಧರ್ಮಸಿಂಗ್ : ಈಗಾಗಲೇ ವಿಕಾಂತಯ್ಯನವರು ಈ ಪ್ರಶ್ನೆ ಕೇಳಿದ್ದಾರೆ. 201 ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟ ಹಾಗೆ ಕೇಂದ್ರಕ್ಕೆ ಏನು ವರದಿ ಸಲ್ಲಿಸಿದ್ದೇವೆ ಅದರ ಹಿನ್ನೆಲೆಯಲ್ಲಿ ಅಧ್ಯಯನ ತಂಡವನ್ನು ಕರ್ನಾಟಕಕ್ಕೆ ಕಳುಹಿಸಿದ್ದಾರೆ. ತಂಡದವರು ಎಲ್ಲ ಕಡೆ ನೋಡಿ ಬಂದಿದ್ದಾರೆ. ನಮ್ಮ ಜೊತೆ ಕೂಡ ಮಾತನಾಡಿದ್ದಾರೆ. ಮುಖ್ಯಕಾರ್ಯದರ್ಶಿಯವರ ಜೊತೆ ಮಾತನಾಡಿದ್ದಾರೆ. ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ತಮ್ಮ ವರದಿಯನ್ನು ಕೇಂದ್ರಕ್ಕೆ ಕೊಟ್ಟಿದ್ದಾರೆ. ಅವರು ಕೂಡ ಕನ್ವಿನ್ಸ್ ಆಗಿದ್ದಾರೆ. ಅವರು ನಮಗೆ ಅಂಕಿಅಂಶ ಕೊಟ್ಟಿಲ್ಲ. ಕೇಂದ್ರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ.

ರೇಷ್ಮೆ ಆಮದು ಕುರಿತು

151 -ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ರೇಷ್ಮೆ ಖಾತೇ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಆಮದನ್ನು ಮಾಡಿಕೊಳ್ಳುತ್ತಿರುವುದರಿಂದ ರೇಷ್ಮೆ ಬೆಳೆಗಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರೇಷ್ಮೆ ಆಮದನ್ನು ನಿಲ್ಲಿಸಲು ಸರ್ಕಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಮನವಿಯನ್ನು ಸಲ್ಲಿಸಲಾಗಿದೆ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):

ಅ) ಬಂದಿದೆ.

ಆ) ಸಲ್ಲಿಸಿದೆ.

ಇ) 1992 ಫೆಬ್ರವರಿ ತಿಂಗಳಲ್ಲಿ, ನಂತರ ಏಪ್ರಿಲ್ 93ರಲ್ಲಿ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೆ, ರೇಷ್ಮೆ ಬೆಳೆ ವಾಣಿಜ್ಯ ಬೆಳೆಯಾಗಿ ಕರ್ನಾಟಕದಲ್ಲಿ ಹೆಚ್ಚು ಅಭಿವೃದ್ಧಿ ಹೊಂದುತ್ತಿದೆ. ಸರ್ಕಾರದವರು ಕೂಡ ಸಾಕಷ್ಟು ಬೆಳೆಗಾರರಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಆದರೆ ಬೆಳೆದಂಥ ಪದಾರ್ಥಕ್ಕೆ ರೇಟ್ ಇಲ್ಲವೆಂದು ಸರ್ಕಾರದ ಗಮನಕ್ಕೆ ಹಲವಾರು ವರ್ಷಗಳಿಂದ ಗೊತ್ತಾಗಿದೆ. 1992ರಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಆಮದು ಮಾಡಿಕೊಳ್ಳಬೇಡಿ ಎಂದು ಹೇಳಿದ್ದೇವೆಂದು ಅವರ ಉತ್ತರದಲ್ಲಿ ಹೇಳಿದ್ದಾರೆ. ಎರಡು ವರ್ಷಗಳ ಕಾಲ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳದಿದ್ದರೆ, ರಾಜ್ಯ ಸರ್ಕಾರ ಒತ್ತಾಯ ಮಾಡದಿದ್ದರೆ ಬೆಳೆಗಾರರ ಗತಿ ಏನು? ಈಗಾಗಲೇ ಸಾಕಷ್ಟು ನಷ್ಟು ಹೊಂದುವ ಸ್ಥಿತಿಯಲ್ಲಿದ್ದಾನೆ. ಒಂದು ಕಡೆ ಪ್ರೋತ್ಸಾಹ ಕೊಡುವುದು, ಮತ್ತೊಂದು ಕಡೆ ರೇಟ್ ಇಲ್ಲದ ವಾತಾವರಣ ನಿರ್ಮಾಣವಾಗಿ ಅಭಿವೃದ್ಧಿ ಕುಂಠಿತವಾಗಬಹುದು. ಆದ್ದರಿಂದ ಸಂಬಂಧಪಟ್ಟ ಸಚಿವರು ಆ ದಿಸೆಯಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ಹೇಳಬೇಕು.

ಡಾ: ಜಿ. ಪರಮೇಶ್ವರ : ಮಾನ್ಯ ಸದಸ್ಯರು ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಇವತ್ತಿನ ದಿವಸ ಕೇಳಿದ್ದಾರೆ. ಈ ವಿಚಾರದಲ್ಲಿ ಅನೇಕ ಬಾರಿ ಈ ಸದನದಲ್ಲಿ ಚರ್ಚೆಯಾಗಿದೆ. ನಾನು ಕಳೆದ ಸಾರಿ ಜನವರಿ 1993ರಲ್ಲಿ ಈ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದೆ. ಏನೆಂದರೆ, ಒಂದು ನಿಯೋಗ ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ಮನವಿ ಸಲ್ಲಿಸಿ ಇದನ್ನು ಬ್ಯಾನ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು. ಆ ಪ್ರಕಾರ 29-1-93ರಲ್ಲಿ ಒಂದು ನಿಯೋಗವನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಇದರ ಬಗ್ಗೆ ಚರ್ಚೆ ಮಾಡಿದ ನಂತರ ಅವರು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಆ ಕ್ರಮಗಳ ಬಗ್ಗೆ ನಾನು ಈಗಾಗಲೇ ತಿಳಿಸಿದ್ದೇನೆ. ಆ ಪ್ರಕಾರ ಅಡ್ವಾನ್ಸ್ ಲೈಸೆನ್ಸಿಂಗ್ ಸ್ಕೀಂನಲ್ಲಿ ಇಂಪೋರ್ಟ್ ಮಾಡುತ್ತಿದ್ದುದನ್ನು ರೆಗ್ಯುಲೇಟ್ ಮಾಡುವುದಕ್ಕೆ ಮತ್ತು ಇನ್ಪುಟ್ ಮತ್ತು ಔಟ್ಪುಟ್ ರೇಷಿಯೋ ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಆದರೂ ಸಹ ನಮಗೆ ಅದು ಸಾಕಾಗುವುದಿಲ್ಲ. ಅದರ ಎಫೆಕ್ಟ್ ಮಾರುಕಟ್ಟೆಯಲ್ಲಿ ಏನೂ ಆಗಿಲ್ಲ. ಬೆಲೆ ಸರಿಯಾಗಿ ನಿಯಂತ್ರಣವಾಗಲಿಲ್ಲವೆಂದು ನಾನು ಅವರಿಗೆ 11-10-93ರಲ್ಲಿ ಮತ್ತೊಂದು ಮನವಿಯನ್ನು ಸಲ್ಲಿಸಿದ್ದೇನೆ. ಆದಾದಮೇಲೆ ಕಳೆದ ತಿಂಗಳು ಅಂದರೆ 25-1-94ರಲ್ಲಿ ನಮ್ಮ ಮುಖ್ಯ ಮಂತ್ರಿಗಳು ಕೂಡ ಅಲ್ಲಿನ ಟೆಕ್ಸ್ಟೈಲ್ ಮಂತ್ರಿಗಳಿಗೆ ಒಂದು ಪತ್ರ ಬರೆದು ನಾನು ಖುದ್ದಾಗಿ ಅದನ್ನು ತೆಗೆದುಕೊಂಡು ಹೋಗಿ ಚರ್ಚೆ ಮಾಡಿ ಟೋಟಲಿ ಬ್ಯಾನ್ ಮಾಡಬೇಕೆಂದು ಮನವಿ ಸಲ್ಲಿಸಿದ್ದೇನೆ. ಇದಲ್ಲದೆ ಪಾರ್ಲಿಮೆಂಟಿನಲ್ಲಿ ಕರ್ನಾಟಕದ ನಮ್ಮ ಗೌರವಾನ್ವಿತ ಸದಸ್ಯರು ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ಇದರ ಬಗ್ಗೆ ಕೂಡ ಪಾರ್ಲಿಮೆಂಟ್ ಕಮಿಟಿ ರಚನೆ ಮಾಡಿದ್ದಾರೆ. ಮೊನ್ನೆ ತಾನೇ ನಮ್ಮ ಕಮೀಷನ್ರವರು ಹೋಗಿ ಆ ಕಮಿಟಿಯಲ್ಲಿ ಚರ್ಚೆ ಮಾಡಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡಿ ಬಂದಿದ್ದಾರೆ. ಆದುದರಿಂದ ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಿಲ್ಲ ಅಥವಾ 1992ರಲ್ಲಿ ನಾವು ಕಾಗದ ಬರೆದು ಹಾಗೇ ಕುಳಿತಿದ್ದೇವೆಂಬ ವಿಚಾರ ಅಲ್ಲ. ಇದಲ್ಲದೆ ನಾವು ಕೂಡ ಕರ್ನಾಟಕ ರಾಜ್ಯದ ವತಿಯಿಂದ ರಾಜ್ಯದೊಳಗೆ ಏನೇನು ಮಾಡಬೇಕು ಅದಕ್ಕೂ ಕ್ರಮ ಕೈಗೊಳ್ಳುತ್ತಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ : ರೇಷ್ಮೆ ಗೂಡಿನ ಬೆಲೆ 200-300 ರೂಪಾಯಿ ಇದ್ದದ್ದು 60-70ರೂಪಾಯಿಗೆ ಇಳಿದಿದೆ. ಬಹುತೇಕ ಗ್ರಾಮೀಣ ಬದುಕಿಗೆ ಆಶ್ರಯವಾಗಿರತಕ್ಕ ಈ ಕಸುಬು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿರುವುದರಿಂದ ತಾವೇನಾದರೂ ಮಾಡಿ 17ನೇ ತಾರೀಖಿನೊಳಗೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುವುದಾದರೆ ನಾನು ಈಗ ವಿವರಣೆ ಕೇಳುವ ಪ್ರಯತ್ನ ಮಾಡುವುದಿಲ್ಲ.

ಅಧ್ಯಕ್ಷರು : ಬರೆದು ಕಳುಹಿಸು. ಈಗ ಅವರ ಪ್ರಶ್ನೆಗೆ ಸಪ್ಲಿಮೆಂಟರಿ ಇದ್ದರೆ ಕೇಳಿ.

ಶ್ರೀ ವೈ.ಕೆ. ರಾಮಯ್ಯ : ಕಾನೂನಿನ ಚೌಕಟ್ಟಿನಲ್ಲಿ ಎಷ್ಟು ವಿಧವಾದ ಆಮದನ್ನು ಈ ರಾಷ್ಟ್ರಕ್ಕೆ ಮಾಡಿಕೊಳ್ಳುತ್ತಿದ್ದೀರಿ? ನೀವು ಅಂದರೆ ಕೇಂದ್ರ ಸರ್ಕಾರ. ಇದು ರಾಜ್ಯ ಸರ್ಕಾರದ ಸಮಸ್ಯೆ ಅಲ್ಲ. ರಾಜ್ಯ ಸರ್ಕಾರಕ್ಕೂ ಇದಕ್ಕೂ ಸಂಬಂಧವಿಲ್ಲ. ಆದಕಾರಣ ಎಷ್ಟು ವಿಧವಾದ ಆಮದನ್ನು ಕಾನೂನಿನ ಚೌಕಟ್ಟಿನಲ್ಲಿ ಕೇಂದ್ರ ಸರ್ಕಾರ ಮಾಡಿ ಕೊಳ್ಳುತ್ತಿದೆ? ಕದ್ದು ಬರುತ್ತಿರತಕ್ಕ ಮಾಲು ಎಷ್ಟು? ಗ್ಲಾಂಡಸ್ಟೈನ್ ಇಂಪೋರ್ಟ್. ಇಂಪೋರ್ಟ್ ಎಂದು ಹೇಳುವುದಕ್ಕಾಗುವುದಿಲ್ಲ. ಗ್ಲಾಂಡಸ್ಟೈನ್ ಅರೈವರ್ ಅದು ಎಷ್ಟು ನಿಮ್ಮ ಮಾಹಿತಿ ಪ್ರಕಾರ? ಮೂರನೆಯದಾಗಿ ಕೇಂದ್ರ ಸರ್ಕಾರದ ಉದಾರ ಆರ್ಥಿಕ ನೀತಿಯಿಂದ ಮಾಡಿರುವಂತ ಪಟ್ಟಿಯಲ್ಲಿ ಇದೇನಾದರೂ ಆಮದು ನೀತಿಯಲ್ಲಿ ಸೇರಿಕೊಂಡಿದೆಯೇ? ನಾಲ್ಕನೆಯದಾಗಿ, ಈ ರಾಷ್ಟ್ರಕ್ಕೆ ರೇಷ್ಮೆ ಆಮದು ಮಾಡಿಕೊಳ್ಳುವುದಕ್ಕೆ ಯಾವುದಾದರೂ ಸಕಾರಣ ಇದೆಯೇ? Is there any justification for import of the Raw silk? ಇಷ್ಟಕ್ಕೆ ದಯವಿಟ್ಟು ತಾವು ಉತ್ತರ ಕೊಡಬೇಕು?

ಡಾ: ಜಿ. ಪರಮೇಶ್ವರ : ಇದಕ್ಕೆ ಪ್ರತ್ಯಕ್ಷವಾಗಿ ನಾನು ಉತ್ತರ ಒದಗಿಸಿಕೊಡುತ್ತೇನೆ. ಏಕೆಂದರೆ ಕೇಂದ್ರ ಸರ್ಕಾರದ ವತಿಯಿಂದ ನಮಗೆ ಮಾಹಿತಿ ಬರಬೇಕು. ಕಾರಣ, ಕಳ್ಳಸಾಗಾಣಿಕೆಯಲ್ಲಿ ಬರತಕ್ಕ ಮಾಲು ಎಷ್ಟು ಎಂದು ಪ್ರಶ್ನೆ ಕೇಳಿದ್ದೀರಿ? ಅದಕ್ಕೆ ಯಾರೂ ಸ್ಟ್ಯಾಟಿಸ್ಟಿಕ್ಸ್ ಕಲೆಕ್ಟ್ ಮಾಡಿ ಇಡುವುದಕ್ಕಾಗುವುದಿಲ್ಲವೆಂದು ಗೆಸ್ ಮಾಡಿ ಇಟ್ಟಿದ್ದಾರೆ. 4 ಸಾವಿರಕ್ಕೂ ಹೆಚ್ಚು ಟನ್ ಕಳೆದ ವರ್ಷ ಬಂದಿದೆ ಎಂದು ಒಂದು ಅಂದಾಜಿನ ಮೇಲೆ,ಉಪಯೋಗ ಮಾಡತಕ್ಕವರ ಜೊತೆ ಸ್ಟಾಟಿಸ್ಟಿಕ್ಸ್ ಕಲೆಕ್ಟ್ ಮಾಡಿ ಸೆಂಟ್ರಲ್ ಸಿರಿಕಲ್ಚರ್ ಬೋರ್ಡಿನವರು ವರ್ಕ್‌ಔಟ್ ಮಾಡಿ ಇಟ್ಟಿದ್ದಾರೆ. ಅಷ್ಟು ಬಿಟ್ಟರೆ ನಮಗೆ ಬೇರೆ ರೀತಿಯಲ್ಲಿ ಅಂಕಿಅಂಶ ಸಿಗುತ್ತಿಲ್ಲ. ಆ ದೃಷ್ಟಿಯಿಂದ ಪ್ರತ್ಯೇಕವಾಗಿ ನಾನು ಅವರಿಗೆ ತಿಳಿಸಿಕೊಡುತ್ತೇನೆ.

ಶ್ರೀ ಎನ್.ಜಿ. ನಾಯಕ್ : ಇದರಲ್ಲಿ ಮೊಟ್ಟೆ ಮಾಡತಕ್ಕ ಕೇಂದ್ರವನ್ನು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ನಾನು ಸದನದಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ. ಬಡ ರೈತರ ಅನುಕೂಲಕ್ಕೋಸ್ಕರ ಮಾಡಬೇಕು. ಏಕೆಂದರೆ ಬಹಳ ಚೆನ್ನಾಗಿ ಬೆಳೆಯುತ್ತಿದೆ. ಬಳ್ಳಾರಿ, ಕೂಡ್ಲಿಗಿ, ರಾಯದುರ್ಗ ಈ ಎಲ್ಲ ಸೇರಿಸಿ ಒಂದು ಕೇಂದ್ರ ಮಾಡಿದರೆ ಒಳ್ಳೆಯದು ಅನ್ನಿಸುತ್ತದೆ. ನನಗೆ ಸದನದಲ್ಲಿ ಆ ಬಗ್ಗೆ ಆಶ್ವಾಸನೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

(ಉತ್ತರವಿಲ್ಲ)

ಕಟ್ಟಡಗಳ ನಿರ್ಮಾಣಕ್ಕಾಗಿ ಪರವಾನಿಗೆಯ ಮಂಜೂರಾತಿ

42 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮಹಾನಗರ ಪಾಲಿಕೆಯಲ್ಲಿ ಬಹುಮಹಡಿ ಕಟ್ಟಡ ಮತ್ತಿತರ ಅಕ್ರಮ ಕಟ್ಟಡಗಳನ್ನು ನಿರ್ಮಿಸಲು ಪರವಾನಗಿ ಕೊಟ್ಟ ಬಗ್ಗೆ ತನಿಖೆ ನಡೆಸುವಂತೆ ಕೇಳಲಾಗಿತ್ತೇ?